ಪೂಜಾರಯ್ಯ ಹೇಳುತ್ತಿದ್ದರು '.....ಕಾರಯ್ಯನ ಪರ್ಸಿಗೆ ಗಾಡಿ ಹೊಡೆದುಕೊಂಡು ಹೋದ ಪಾಲಯ್ಯ ಸತ್ತು ನಾಕು ತಿಂಗಳ ಹಿಂದು ಮುಂದು ಆಯಿತೇನೊ? ಮಾಡುವುದೇನು, ತಾಯಿಯ ಇಚ್ಛೆ, ಅವನ ಆಯಸ್ಸು ಅಷ್ಟೇ ಇದ್ದಿರಬಹುದು. ಆದರೆ ತಿಂಗಳು ದಿನ ಕಳೆಯುವುದರೊಳಗೆ ಈ ಮಾದೇವಿ ಚಿರತೆಬಯಲಿನ ಜಾತಸ್ಥನಲ್ಲದ ಹೈದನನ್ನು ಕಟ್ಟಿಕೊಂಡು ವಾಲಾಡುತ್ತ ಸಕಲೆಂಟು ಗ್ರಾಮದವರಿಂದಿರಲಿ, ಇದೇ ಊರ ಮಿಕ್ಕ ಜಾತಸ್ಥರೆದುರು ತನ್ನ ಕುಲ ಮಾನ ಮರ್ಯಾದೆಯನ್ನು ಕಾಸಿಗೂ ಇಲ್ಲದಂತೆ ಮಾರಿರುವಳು. ನಾಳೆ ತಾಯಿಯ ಹಬ್ಬ, ಅವಳ ಮುಂದೆ ಮಾದೇವಿಯ ತಪ್ಪನ್ನು ಹೇಗೆ ಒಪ್ಪಿಸುವುದು' ಅನ್ನುತ್ತ ಪೂಜಾರಯ್ಯ ಕಟ್ಟೆಯ ಕೆಳಗಣ ಹೆಣ್ಣಿನ ಕಡೆಗೆ, 'ಏನಮ್ಮೆ ಮಾದೇವಿ, ನೆತ್ತಿ ಮೇಲೆ ಪ್ರಾಯ ಅದೆ ಅಂತ ಆಡಬೋದ ಈ ಆಟನ, ನಿನ ಕುಲಸ್ತ್ರ ಮರ್‍ಯಾದಿ ಎಲ್ಲಿಗಂಟ ಬಂದೊಯ್ತು...' ಅಂದರು.

ದೊಡ್ಡ ತಮ್ಮಯ್ಯನವರದ್ದು, ಚಿರತೆ ಬಯಲಿನ ಜಾತಸ್ಥನಲ್ಲದ ಗೆಣೆಕಾರನನ್ನು ಮಾದೇವಿಯಿಂದ ಬಿಡಿಸಲು ಮೊದಲು ಪ್ರಯತ್ನಿಸುವುದು. ಅಂದರೆ ತಾಯಿಯ ಮುಂದೆ ತಪ್ಪು ಒಪ್ಪಿಸಿ ದಂಡ ಕಟ್ಟಿಸುವುದು. ಇದಕ್ಕೆ ಮಾದೇವಿ ಒಪ್ಪದಿದ್ದರೆ ಅವಳು ಊರು ಬಿಡದಂತೆ ನೋಡಿಕೊಂಡು ಬೆಂಕಿ, ನೀರು ಕೊಡದೆ ಸತಾಯಿಸುವುದು, ಅನ್ನುವ ಅಭಿಪ್ರಾಯವನ್ನು ಮುಂದಿಟ್ಟು 'ಜಾತಸ್ತ್ರ, ಕುಲಸ್ತ್ರ ಹೇಳ್ರಪ್ಪ ಹೆಂಗ್ಮಾಡನ' ಅಂದರು.

ತಿರುಗಿ ಪೂಜಾರಯ್ಯನೇ ಮಾತೆತ್ತಿದರು: ಅಷ್ಟಕ್ಕೂ ಈ ಹೆಣ್ಣು ಹೆಂಗಸು ತಮ್ಮ ಬಳಿಯೋ, ತಮ್ಮಯ್ಯನವರ ಹತ್ತಿರವೋ ಬಂದು ತಾನು ಈ ಥರದಲ್ಲಿ ಒಂಟಿ ನಿಂತವಳು ಯಾವನಾದರೂ ಗಂಡು ನೋಡಿ ಕೂಡಾವಳಿ ಮಾಡಿಸಿ ದಾರಿ ಮಾರ್ಗ ತೋರಿಸಿ ಅಂದಿದ್ದರೆ ಆಗುತ್ತಿರಲಿಲ್ಲವೊ? ನಮ್ಮೂರಲ್ಲಿ ಹುಟ್ಟಿದ ಹೆಣ್ಣು, ನಾವು ಅನಾದ್ರಿಯಾಗಲು ಬಿಡುತ್ತಿದ್ದೆವೊ? ಅಂದರು.

ಶಿರ ಬಗ್ಗಿಸಿ ಮಾತಿಲ್ಲದೆ ಕೂತಿದ್ದ ಕುಂಟ ರಂಗಪ್ಪ ಬಹಳ ಯೋಚನೆ ಮಾಡಿ ಮುಗಿಸಿದವನಂತೆ ತಲೆಯೆತ್ತಿ 'ಯಲ್ರು ವಸಿ ತಡಿರಿ ನಾ ವೊಂದೇಳ್ತೀನಿ' ಅಂದ. ತಾಯಿ ಮಾರವ್ವನ ಊರ ವ್ಯವಹಾರವನ್ನೆಲ್ಲ ನೋಡುವವಳೇ ಆಗಿದ್ದಾಳೆ. ಮಾದೇವಿ ನಾಳೆ ಆಯಮ್ಮನ ಪಾದಕ್ಕೆ ಬಿದ್ದು ಕಾಣಿಕೆ ಒಪ್ಪಿಸಿ ತಪ್ಪು ಒಪ್ಪಿಕೊಳ್ಳುವಳೋ ಇಲ್ಲ, ಅಂಥದೇನೂ ಬೇಡವೆಂದು ಗಣೆಕಾರನೊಂದಿಗೆ ಓಡಿಹೋಗಿ ಚಿರತೆ ಬಯಲು ಸೇರಿಬಿಡುವಳೋ, 'ಅದ ಪಸ್ಟು ಕೇಳಿಬುಡ್ರಿ ಆಯಮ್ಮನ' ಅಂದ.

ಆಗಿಂದಾಗಲೇ ದೊಡ್ಡ ತಮ್ಮಯ್ಯನವರು ಭಗ್ಗನೆದ್ದರು. ಹಾಗೇನಾದರೂ ಊರವರ ಮಾತು ಮೀರಿ ಮಾದೇವಿ ಅವನೊಂದಿಗೆ ಓಡಿಹೋಗುವುದೇ ಆದರೆ ಅವಳನ್ನಿಡಿದು ತಲಾಕೊಂದೊ ಏಟುಹಾಕಿ ಕೈಕಾಲು ಮುಖ ಮುರಿದು ಊರಾಚೆ ಹಾಕಿಬಿಡುವುದು. ಆ ಮುಂದೆ ಬೇಕಾದರೆ ಗಂಡನೋ ಮಿಂಡನೋ ಬಂದು ಅವಳ ಎತ್ತಿಕೊಂಡು ಹೋಗಬಹುದು. 'ಅನ್ನಿಂದೆ ಓಡೊಯ್ತಿನಿ ಅಂದ್ರೇನಯ್ಯ ಕುಲಸ್ತ್ರಾಗಿ ಕೂತಿರ ನಮ್ಮಗಳ ಮಾನ ಏನಯ್ಯ ಆದದು' ಅಂದರು.

ಮರದ ಬುಡಕ್ಕೆ ಒರಗಿ ಕೂತಿದ್ದ ಕಲ್ಲಜ್ಜ, ತಾನು ಹುಟ್ಟಿದ ತೊಂಬತ್ತು ವರ್ಷದ ಲಾಗಾಯ್ತು ಗ್ರಾಮದ ಹೆಣ್ಣೊಂದು ಈ ಬಗೆಯಲ್ಲಿ ಹಾದಿ ಬಿಟ್ಟಿದ್ದ ನೋಡಿಯೇ ಇಲ್ಲ. ಕೇರಿಯಲ್ಲಿ ಇಂಥ ಹೆಣ್ಣು ಹುಟ್ಟಿದ್ದು ತಪ್ಪು. ಆ ತಾಯಿ ಮಾರವ್ವನು ತನಗೆ ಮುಪ್ಪ ತಾರದೆ ಇನ್ನೂ ಶಕ್ತಿ ಉಳಿಸಿದ್ದರೆ ಇಷ್ಟು ಹೊತ್ತಿನವರೆಗೂ ಈ ನ್ಯಾಯ ಕೇಳಿಕೊಂಡು ಮಾದೇವಿಯ ಮುಖ ನೋಡಿಕೊಂಡು ಕೂರುತ್ತಿರಲಿಲ್ಲ. ತಾನೂ ಕೆಟ್ಟು, ಕುಲಸ್ತರ ಮರ್‍ಯಾದೆಯನ್ನೂ ತೆಗೆದ ಹೆಣ್ಣಿನ ಮಂಡೆ ಚೆಂಡು ತುಂಡು... ಅನ್ನುವಷ್ಟೊತ್ತಿಗೆ ಅಜ್ಜನನ್ನು ಕೆಮ್ಮು ಆವರಿಸಿಕೊಂಡಿತು. ಅಲ್ಲೇ ಇನ್ನೇನು ಜೀವ ಹೋಗಿಬಿಡಬಹುದು ಎನ್ನುವಂತೆ ಎಳೆದೆಳೆದು ಕೆಮ್ಮತೊಡಗಿದ.